ಅಂತ. ಅಂವಾ ಎಲ್ಲಿದ್ದಾನ ಹ್ಯಾಂಗಿದ್ದಾನ ಏನ ಮಾಡಲಿಕತ್ತಾನ ಒಂದೂ ಗೊತ್ತಿಲ್ಲ ನನಗ’ ಎನ್ನುತ್ತ ಮೇಲೆದ್ದರು ಕೊಂಡಾಜಿ.

ಗುರುರಾಜ ಈ ವಿಷಯವನ್ನು ಇಷ್ಟಕ್ಕೇ ಬಿಡುವವನಲ್ಲ ಎನ್ನುವುದು ಅವರಿಗೂ ಗೊತ್ತಿತ್ತು. ಒಂದು ಎಳೆ ಸಿಕ್ಕರೆ, ಈಗಿನ ಹುಡುಗರು ತಂತ್ರಜ್ಞಾನದ ಸಹಾಯದಿಂದ ಪಾತಾಳದಲ್ಲಿದ್ದರೂ ಮಾಹಿತಿ ಹುಡುಕಿ ತೆಗೆಯುತ್ತಾರೆ. ಒಳಗಿಂದೊಳಗೇ ಕೊಂಡಾಜಿಯವರಿಗೂ ತಮ್ಮ ನೆಚ್ಚಿನ ಶಿಷ್ಯನ ಬಗ್ಗೆ ತಿಳಿದುಕೊಳ್ಳುವ ಕುತೂಹಲವಿತ್ತೊ ಏನೊ?

ನಿಜ. ಗುರುರಾಜನಿಗೆ ಒಂದು ಎಳೆ ಸಿಕ್ಕಿತ್ತು. ಆತ ಅದನ್ನೇ ಹಿಡಿದುಕೊಂಡು ಒಂದೊಂದೇ ಹೆಜ್ಜೆ ಇಡತೊಡಗಿದ. ಕೊನೆಗೂ ತೇಜಶ್ರೀಯ ಮನೆಯನ್ನು ಪತ್ತೆ ಮಾಡಿದ. ಆತನನ್ನು ಮುಖತಃ ಭೆಟ್ಟಿಯಾಗಲು ಬಂದೂಬಿಟ್ಟ. ಬಾಗಿಲು ತೆರೆದಾತ ಅರೆನೆರೆತ ಅಸ್ತವ್ಯಸ್ತ ಕೂದಲಿನ, ಸುಕ್ಕಾದ ಪೈಜಾಮ ಜುಬ್ಬಾ ಧರಿಸಿದ ನಲವತ್ತೈದರ ಆಸುಪಾಸಿನ ಕನ್ನಡಕಧಾರಿ. ಮುಖದ ಮೇಲೆ ನಿರ್ಲಿಪ್ತ ಕಳೆ. ನಿರಾಸಕ್ತ ಕಣ್ಣುಗಳು.

ಇದ್ದ ಎರಡು ಪ್ಲಾಸ್ಟಿಕ್ ಕುರ್ಚಿಗಳಲ್ಲಿ ಒಂದರ ಮೇಲೆ ಕುಳಿತುಕೊಳ್ಳುತ್ತ, ತನ್ನ ಪರಿಚಯ ಮಾಡಿಕೊಂಡ ಗುರುರಾಜ. ‘ಸರ್, ನಿಮ್ಮ ಕಾದಂಬರಿ ಅಭಿಜಾತೆ ಓದಿ, ನಿಮ್ಮನ್ನ ಭೆಟ್ಟಿ ಆಗ್ಲೇಬೇಕು ಅನ್ನೂ ಇಚ್ಛಾದಿಂದ ಹುಡಕ್ಕೊಂಡು ಬಂದೀನಿ. ಇಷ್ಟು ಅದ್ಭುತ ಕಾದಂಬರಿ ರಚಿಸಿದ ತಾವು ಮುಂದ ಏನೂ ಬರೀಲಿಲ್ಲ ಯಾಕ ಅನ್ನೂ ಕುತೂಹಲ. ಪ್ರೊಫೆಸರ್ ಕೊಂಡಾಜಿಯವ್ರಿಂದ ತಮ್ಮ ನಿಜ ನಾಮಧೇಯ ಸಿಕ್ತು ಆದ್ರ ನೀವು ಕಾಡು ನುಂಗ್ಲೊ, ಗಾಳಿ ನುಂಗ್ಲೋ ಅನ್ನೂಹಂಗ ಮಾಯ ಆಗಿ ಹೋಗಿದ್ರಿಂದ, ಸಾಕಷ್ಟು ಶ್ರಮ ಪಡಬೇಕಾತು ನಿಮ್ಮನ್ನ ಹುಡಕಲಿಕ್ಕೆ ಕೊಂಡಾಜಿ ಸರ್ ಹೇಳಿದ್ರು ಲೇಖಕನ ಪ್ರೈವಸಿಗೆ ಧಕ್ಕೆ ತರಬಾರ್ದು ಅಂತ. ಆದ್ರ, ಮೈ ಕ್ಯೂರಿಯಾಸಿಟಿ ಗಾಟ್ ಬೆಟರ್’ ಎಂದ.

‘ಕೊಂಡಾಜಿ ಅವ್ರು ಚೊಲೊ ಟೀಚರ್ ಆಗಿದ್ರು’ ನಿಧಾನವಾಗಿ ನುಡಿದ ತೇಜಶ್ರೀಯ ಧ್ವನಿ ಆತನ ಮುಖಭಾವದಷ್ಟೇ ಶುಷ್ಕವಾಗಿತ್ತು. ಆತ ಮಾತು ಮುಂದುವರೆಸುವ ಪ್ರಯತ್ನ ಮಾಡಲಿಲ್ಲ. ಇಂತಹವನು, ಅಭಿಜಾತೆಯಂಥ ಸಂವೇದನಾಶೀಲ ಕಾದಂಬರಿ ಬರೆಯುವುದು ಸಾಧ್ಯವೆ? ಅಭಿಜಾತೆಯ ಕಥಾನಾಯಕ ಈತನೇ ಆಗಿದ್ದಲ್ಲಿ ಭಗ್ನಪ್ರೇಮ ಯಾರನ್ನಾದರೂ ಈ ಪರಿ ಬದಲಿಸಬಹುದೆ? ಮಾತು ಹೇಗೆ ಮುಂದುವರಿಸಬೇಕೆನ್ನುವುದು ತಿಳಿಯದೇ ಚಡಪಡಿಸಿದ ಗುರುರಾಜ.

‘ಸರ್ ಮತ್ತೆ’

‘ನಿಮಗ ಏನಾದ್ರೂ ಕೇಳೂದಿದ್ರ ಕೇಳಬಹುದು’ ಮತ್ತದೇ ನಿರ್ಭಾವುಕ ಧ್ವನಿ.

‘ಸರ್ ತಮ್ಮ ಅಭಿಜಾತೆ ಅತ್ಯಂತ ಸೂಕ್ಷ್ಮವಾದ, ಅದೇ ಕಾಲಕ್ಕ ಅತ್ಯಂತ ಸಾಂದ್ರ, ಗಾಢ ಭಾವನಾಪೂರ್ಣ ಕಾದಂಬರಿ. ಅದು ಕೇವಲ ಕಲ್ಪನೆ ಆಗಿರಲಿಕ್ಕೆ ಸಾಧ್ಯ ಇಲ್ಲ ಅಂತ ನನ್ನ ಅನಿಸಿಕೆ. ಇದಕ್ಕ ತಾವು ಏನ ಹೇಳ್ತೀರಿ?’ ಎಂಥ ಪ್ರತಿಕ್ರಿಯೆ ಬರುವುದೊ ಎಂಬ ಅಳುಕು. ಅರಿವಿಲ್ಲದಂತೆಯೇ ಕುರ್ಚಿಯ ತುದಿಗೆ ಸರಿದು ಕುಳಿತಿದ್ದ ಗುರುರಾಜ.

ಮೌನದ ಕ್ಷಣಗಳು ಅನಂತವೆನಿಸತೊಡಗಿದ್ದವು. ತೇಜಶ್ರೀ ಎಲ್ಲಿಯೊ ಕಳೆದುಹೋಗಿದ್ದ. ಬಾವಿಯ ಆಳದಲ್ಲೆಲ್ಲಿಂದಲೋ ಬಂದಂತೆ ಆತನ ದನಿ ಬಂತು, ‘ಐ ಅಗ್ರೀ ವಿಥ್ ಯೂ’.

‘ಅಂದ್ರ?’ ಗುರುರಾಜ ಇಷ್ಟು ಸರಳವಾದ ಪ್ರತಿಕ್ರಿಯೆಯನ್ನು ನಿರೀಕ್ಷಿಸಿರಲಿಲ್ಲ.

‘ಅಂದ್ರ ಆ ಕಾದಂಬರಿ ಸತ್ಯಘಟನೆ ಆಧರಿಸೇ ಬರದದ್ದು ಕಾದಂಬರಿಯ ಬಹುಪಾಲು ನನ್ನ ಜೀವನದ ಸತ್ಯ ಘಟನೆಗಳೇ. ಪ್ರೈವಸೀಗೆ ಧಕ್ಕೆ ಆಗಬಾರ್ದು ಅಂತ ಹೆಸರು ಮಾತ್ರ ಬದಲಾಯ್ಸೇನಿ. ನನ್ನ ಪ್ರೀತಿ ನನ್ನಿಂದ ದೂರ ಆದಮ್ಯಾಲೆ, ನಾನು ಡಿಪ್ರೆಶನ್ನದಾಗ ಹೊಗಿದ್ದೆ. ಅಕ್ಷರಶಃ ನಾನು ಭಾವನಾತ್ಮಕವಾಗಿ ಸತ್ತುಹೋಗಿದ್ದೆ. ಒಂದ ವರ್ಷಕಾಲ ನನ್ನ ಅಪ್ಪ, ದೂರದ ಈ ಹಳ್ಳಿವಳಗ, ನನ್ನ ನೋವು ಕೊಡುವ ನೆನಪುಗಳಿಂದ, ಪರಿಸರದಿಂದ ದೂರ ತಂದು, ಭಾಳ ಕಾಳಜಿಯಿಂದ ನನ್ನ ನೋಡಿಕೊಂಡ್ರು. ನಿನ್ನ ಮನಸಿನಾಗ ಇದ್ದದ್ದೆಲ್ಲಾ ಹೊರಗ ಹಾಕು ಅಂತ ಅವ್ರ ನನಗ ‘ಅಭಿಜಾತೆ’ ಬರೀಲಿಕ್ಕೆ ಹಚ್ಚಿದ್ರು. ಬರದು ನಾ ಹಗುರ ಆದೆ. ಅದನ್ನ ಪುಸ್ತಕ ಮಾಡ್ಸಿದ್ದೂ ಅವ್ರ. ಈಗ ನಾಕ ವರ್ಷಾತು ಅವ್ರೂ ಹೋಗಿ ಅಪ್ಪ ಒಂದ ಮಾತ ಹೇಳತಿದ್ರು ಲೈಫ್ ಅಂದ್ರ ಒಂದು ಕಂಡಕ್ಟೆಡ್ ಟೂರ್ ಇದ್ದಂಗ. ದೇವ್ರು ಟೂರ್ ಮ್ಯಾನೇಜರ್. ಜರ್ನಿ ಮುಗಿಯೂ ತನಕಾದ್ದು ಪ್ರತಿಯೊಂದು ಚಟುವಟಿಕೆ ಅಂವಾ ಮದಲ ಫಿಕ್ಸ ಮಾಡಿರ್ತಾನ... ಎಲ್ಲಾ ಭಾರಾ ಅಂವನ ಮ್ಯಾಲೆ ಹಾಕಿ ನಿಶ್ಚಿಂತಿಯಿಂದ ಇರು ಆ ಹುಡಗಿ ನಿನ್ನ ಜೀವನದಾಗ ಯಾವ ಪಾತ್ರ ಮಾಡಬೇಕು ಅಂತ ಅಂವಾ ಬರದಾನೊ ಅಷ್ಟು ನಿನಗ ಸಿಗತದ ಅದಕಿಂತಾ ಹೆಚ್ಚೂ ಅಲ್ಲಾ, ಕಡಿಮೀನೂ ಅಲ್ಲಾ ಅಂತ. ಖರೆ ಅದ.’

‘ಸರ್ ಮತ್ತ ನೀವು ಈಗ’

‘ಈಗ ನನ್ನಷ್ಟಕ್ಕ ನಾ ಇದ್ದೇನಿ. ಪಿತ್ರಾರ್ಜಿತ ಹೊಲಾ ಮನಿ ಅವ. ಕಂಪನಿ ಪ್ರೊಜೆಕ್ಟ ವರ್ಕ್ ಕೊಟ್ರ ಮಾಡಿ ಕೊಡತೇನಿ. ಇಲ್ಲಾಂದ್ರ ಪುಸ್ತಕ ಓದತೀನಿ’ ತೇಜಶ್ರೀ ಮೌನವಾದರು.

ಸುತ್ತಲೂ ನೋಡಿದ ಗುರುರಾಜ. ರಾಶಿ ರಾಶಿ ಆಧ್ಯಾತ್ಮಿಕ ಪುಸ್ತಕಗಳು. ಮನೆಯಲ್ಲಿ ಹೆಚ್ಚಿನ ಪೀಠೋಪಕರಣಗಳಾಗಲಿ, ಸಾಮಾನುಗಳಾಗಲೀ ಕಾಣಲಿಲ್ಲ. ಒಳಕೋಣೆಯ ತೆರೆದ ಬಾಗಿಲಿನಿಂದ ಗವಸುಹಾಕಿದತಂಬೂರಿ,ಧೂಳುಹೊದ್ದ ಕ್ಯಾನ್ವಾಸು ಬ್ರಶ್ಶುಗಳು ಅಸ್ತವ್ಯಸ್ತವಾಗಿ ಹರಡಿಕೊಂಡದ್ದು ಕಾಣಿಸಿತು. ಹೆಂಡತಿ ಮಕ್ಕಳ ಇರವಿನ ಸುಳಿವಿಗಾಗಿ ಕಣ್ಣಾಡಿಸಿದ. ಕಾಣಲಿಲ್ಲ. ತೇಜಶ್ರೀ ಮದುವೆ ಮಾಡಿಕೊಳ್ಳಲೇ ಇಲ್ಲವೆ? ಕೇಳಲೊ ಬೇಡವೊ ಎಂಬ ತಾಕಲಾಟದಲ್ಲಿ ಮುಳುಗಿರುವಾಗ, ಆತನ ಪ್ರಶ್ನೆಯನ್ನು ಅರಿತವನಂತೆ, ‘ಇಲ್ಲಾ. ನಾ ಮದವಿ ಮಾಡಿಕೊಂಡಿಲ್ಲ ನನ್ನ ಹೃದಯದ ಎಲ್ಲಾ ಪ್ರೀತಿಯನ್ನ ಅಭಿಜಾತೆಯ ಪಾಲಿಗೆ ಬರದ ಬಿಟ್ಟೇನಿ. ಅಕಿ ನನ್ನ ಜೋಡಿ ಇದ್ದಾಳೊ ಇಲ್ಲೊ, ನನ್ನ ಪ್ರೀತ್ಸಿದ್ಲೊ ಇಲ್ಲೊ, ನನಗ ದಕ್ಕೀದ್ಲೊ ಇಲ್ಲೊ ಅವು ಬ್ಯಾರೆ ಮಾತು. ನಾನು ಅಕಿನ್ನ ಪ್ರೀತಸ್ಗೊತನ ಇರ್ತೀನಿ ಪ್ರೀತಿ ಪ್ರೇಮ ಅನುರಾಗ ಅನ್ನೋದು ಜೀವನದಾಗ ಒಂದ ಸಲಾ ಮಾತ್ರ ಹುಟ್ಟೂ ಅಂಥಾದ್ದು. ಮತ್ತೊಬ್ಬ ಹೆಣ್ಣಿಗೆ ಕೊಡಲಿಕ್ಕೆ ಏನೂ ಉಳದಿಲ್ಲ ಈಗ ನನ್ನ ಕಡೆ’ ಎಂದ ತೇಜಶ್ರೀ.

‘ಸರ್, ಇನ್ನೊಂದು ಮಾತು ನೀವು ನನ್ನದು ಉಪದ್ವ್ಯಾಪ ಅಂದುಕೋಳ್ಳಿದ್ರ’ – ತೇಜಶ್ರೀ ತಲೆಯಾಡಿಸಿದ್ದನ್ನು ನೋಡಿ ಗುರುರಾಜ ಮುಂದುವರೆದ, ‘ನೀವಿಬ್ರೂ ಅಗಲಿದ ಮ್ಯಾಲೆ, ಅಭಿಜಾತೆಯ ಜೀವನದಾಗ ಏನು ನಡದದ ಅನ್ನೋದನ್ನ ತಿಳಕೋಳಿಕ್ಕೆ ಯಾವಾಗಾದ್ರೂ ಪ್ರಯತ್ನ ಮಾಡೀದ್ರಾ?’

ತೇಜಶ್ರೀ ಅಡ್ಡಡ್ಡ ತಲೆಯಾಡಿಸಿದ. ‘ಇಲ್ಲಾ. ಅಕಿವಳಗ ಪ್ರತಿಭಾ ಇತ್ತು. ಅಕಿ ಅವ್ವಾ ಅಕಿ ಬಗ್ಗೆ ಭಾಳ ಕನಸ ಕಂಡಿದ್ಲು ಪ್ರಸಿದ್ಧ ಆಗಿರಬೇಕು ದೇಶ ವಿದೇಶದಾಗ ತನ್ನ ನೃತ್ಯ ಕಾರ್ಯಕ್ರಮಗಳನ್ನ ಕೊಡತಿರಬೇಕು ನನಗೂ ಅದ ಬೇಕಾಗಿತ್ತು. ಅಕಿ ಸಂತೋಷದಿಂದ ಇದ್ರ ಆತು ಅಕಿ ದಾರಿವಳಗ ಮುಳ್ಳಾಗಬಾರ್ದು ಅಂತ ದೂರಾನ ಉಳದೆ’.

ಗುರುರಾಜ ತುಸು ಹೊತ್ತು ತನ್ನಲ್ಲೇ ತಾನು ಮಥಿಸುತ್ತ, ಅಳೆದೂ ಸುರಿದೂ ನಡುಗುವ ಸ್ವರದಲ್ಲಿ ನುಡಿದ, ‘ಸರ್ ಅಕಸ್ಮಾತ್, ಶ್ರೀಲತಾ ಇವತ್ತಿಗೂ ನಿಮ್ಮ ನೆನಪಿನಾಗ ಕೊರಗಲಿಕತ್ತಾಳ ಅಂತ ಗೊತ್ತಾದ್ರ ನೀವು ಅನಕೊಂಡ್ಹಂಗ ಏನೂ ಆಗಿಲ್ಲಾ ಪ್ರೀತಿ ಕಳೆದುಕೊಂಡ ಅವಳ ಗೆಜ್ಜೆಗಳು ಧ್ವನಿ ಕಳೆದುಕೊಂಡು ಮೌನವಾಗಿವೆ ಅಂತ ಗೊತ್ತಾದ್ರ’

ಶ್ರೀಲತಾ ಎನ್ನುವ ಹೆಸರು ಕೇಳುತ್ತಲೇ ತೇಜಶ್ರೀ ಧಿಗ್ಗನೆ ಎದ್ದು ನಿಂತ. ಆತನ ಕಣ್ಣಿನಲ್ಲೊಂದು ಮಿಂಚು ಇಣುಕಿತು. ಗುರುರಾಜನನ್ನು ಪರೀಕ್ಷಾರ್ಥವಾಗಿ ನೋಡುತ್ತ, ‘ಯಾರು ನೀವು? ನಿಮಗ ಶ್ರೀಲತಾ ಹ್ಯಾಂಗ ಗೊತ್ತು? ಹೌ ಈಜ್ ಶಿ?’ ಎನ್ನುತ್ತ ಹತ್ತಿರ ಬಂದು ಗುರುರಾಜನ ಭುಜ ಗಟ್ಟಿಯಾಗಿ ಹಿಡಿದು ಉದ್ವೇಗದಿಂದ ಅಲ್ಲಾಡಿಸತೊಡಗಿದ.

ಗುರುರಾಜನಿಗೆ ತಿಳಿಯಿತು ತಾನು ಗಮ್ಯ ತಲುಪಿದ್ದೇನೆಂದು. ತೇಜಶ್ರೀಯ ಕೈಗಳನ್ನು ತನ್ನ ಬೆಚ್ಚಗಿನ ಕೈಗಳಲ್ಲಿ ತೆಗೆದುಕೊಳ್ಳುತ್ತ, ‘ನಾನು ಶ್ರೀಲತಾನ ತಮ್ಮ’ ಎಂದ ಗುರುರಾಜ ಶಾಂತವಾಗಿ ನಸುನಗುತ್ತ.

ರವಿತೇಜನ ಕಣ್ಣು ದ್ರವಿಸತೊಡಗಿದವು. ಆತ ಗುರುರಾಜನ ಮುಖವನ್ನೇ ದಿಟ್ಟಿಸತೊಡಗಿದ, ಶ್ರೀಲತಾಳನ್ನು ಅದರಲ್ಲಿ ಹುಡುಕುತ್ತ. ಗಾಳಿಯ ಲ್ಲೆಲ್ಲೋ ಗೆಜ್ಜೆದನಿ ಜೀವಪಡೆದು ತೇಲಿ ಬರುತ್ತಿತ್ತು.

ಪ್ರತಿಕ್ರಿಯಿಸಿ: feedback@sudha.co.in

